# ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
# KARNATAKA LEGISLATIVE ASSEMBLY, RESEARCH AND REFERENCE BRANCH

## ಪತ್ರಿಕಾ ತುಣುಕುಗಳು
## PAPER CLIPPINGS

27

ಇಲಾಖೆ / ವಿಷಯ : DEPARTMENT / SUBJECT: ಕೇಂದ್ರ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 12/3/21

### 17 ರಾಜ್ಯಗಳಲ್ಲಿ ಒಂದು ರಾಷ್ಟ್ರ ಒಂದು ರೇಷನ್ ಕಾರ್ಡ್

**ಹೊಸದಿಲ್ಲಿ:** ಕರ್ನಾಟಕ ಸೇರಿದಂತೆ 17 ರಾಜ್ಯಗಳು 'ಒಂದು ರಾಷ್ಟ್ರ-ಒಂದು ರೇಷನ್ ಕಾರ್ಡ್' ವ್ಯವಸ್ಥೆಯನ್ನು ಅಳವಡಿಸಿವೆ. ಉತ್ತರಾಖಂಡ್ ಇತ್ತೀಚಿನ ರಾಜ್ಯವಾಗಿ ಸೇರ್ಪಡೆಯಾಗಿದೆ ಎಂದು ಹಣಕಾಸು ಸಚಿವಾಲಯ ತಿಳಿಸಿದೆ.

ಈ ಯೋಜನೆಗೆ ಸೇರ್ಪಡೆಯಾದ ರಾಜ್ಯಗಳು ಜಿಎಸ್‌ಡಿಪಿಯ ಹೆಚ್ಚುವರಿ ಶೇ.0.25ರಷ್ಟು ಸಾಲ ಕೊಳ್ಳಲು ಅರ್ಹತೆ ಪಡೆಯುತ್ತವೆ. ಅಂದರೆ ಈ ರಾಜ್ಯಗಳು ಹೆಚ್ಚುವರಿ 37,600 ಕೋಟಿ ರೂ. ಹೆಚ್ಚುವರಿ ಸಾಲ ಪಡೆಯಬಹುದು. ಹೀಗಾಗಿ ಕರ್ನಾಟಕ ಕೂಡ ಹೆಚ್ಚುವರಿ ಸಾಲ ಪಡೆಯಲು ಅರ್ಹತೆ ಗಳಿಸಿದೆ. 12/3/21

ಈ ಪದ್ಧತಿಯಲ್ಲಿ ವಲಸಿಗರಿಗೆ ಯಾವುದೇ ರಾಜ್ಯದಲ್ಲಿ ಪಡಿತರ ಸೌಲಭ್ಯ ಸಿಗಲಿದೆ. ವಲಸಿಗ ಜನತೆಗೆ ಇದರಿಂದ ಪ್ರಯೋಜನ ಸಿಗಲಿದೆ. ನಕಲಿ ರೇಷನ್ ಕಾರ್ಡ್ ಪತ್ತೆಹಚ್ಚಲೂ ಇದು ಸಹಕಾರಿಯಾಗಲಿದೆ.